**ಸಿವಿಲ್ ಜಡ್ಜ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಿರುಗುಪ್ಪ**

**ಸಿ.ಸಿ. 238 /2020**

| | |
|---|---|
| ***ಹೆಸರು*** | ಅಂಕಿತಾ |
| ಗಂಡನ ***ಹೆಸರು*** | ವೆಂಕಟೇಶ್ |
| ***ವಯಸ್ಸು*** | 35 ವರ್ಷ |
| ***ವೃತ್ತಿ*** | ವಿದ್ಯಾರ್ಥಿ |
| ***ವಿಳಾಸ*** | ಸಿರುಗುಪ್ಪ . |

**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು. ದಿನಾಂಕಃ 25-06-2025.**
**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿಯವರಿಂದಃ**

1. ಆರೋಪಿ ನಂಬರ್ 1 ರವರು ನನ್ನ ಗಂಡ. ಆರೋಪಿ ನಂಬರ್ 2 ಮತ್ತು 3 ರವರು ನಮ್ಮ ಮಾವಂದಿರು. ಚಾಸಾ-2 ರವರು ನನ್ನ ತಂದೆ. ಚಾಸಾ-3 ರವರು ನನ್ನ ತಾಯಿ. ಚಾಸಾ-4 ಮತ್ತು 5 ರವರು ನನ್ನ ತಮ್ಮಂದಿರು. ಚಾಸಾ-6 ಮತ್ತು 7 ರವರು ನನಗೆ ಗೊತ್ತು. ದಿಃ 12-12-2013 ರಂದು ನನ್ನ ಮದುವೆ ಆರೋಪಿ ನಂಬರ್ 1 ರವರ ಜೊತೆ ಆಗಿತ್ತು. ಮದುವೆಯಾದ ನಂತರ 1 ತಿಂಗಳು ನಾನು ಮತ್ತು ಆರೋಪಿ ನಂಬರ್1 ರವರು ಚೆನ್ನಾಗಿ ಜೀವನ ಮಾಡಿದೆವು. ನಾವು ಸಿರುಗುಪ್ಪ ಪಟ್ಟಣದಲ್ಲಿ ಬಾಡಿಗೆ ಮನೆಯಲ್ಲಿ ವಾಸಮಾಡುತ್ತಿದ್ದೆವು. ನನಗೆ ಮೊದಲನೆ ಮಗು ಆದ ನಂತರ ನನ್ನನ್ನು ನನ್ನ ತಂದೆ ತಾಯಿ ನೋಡಿಕೊಂಡರು. ನನಗೆ ಎರಡನೇ ಮಗು ಆಯಿತು. ನಂತರ ನಾನು ನನ್ನ ಗಂಡನ ಮನೆಗೆ ಹೋದೆನು. ಅಲ್ಲಿ ಆರೋಪಿ ನಂಬರ್ 1 ರವರು ಹೆಚ್ಚಿನ ವರದಕ್ಷಿಣೆಗಾಗಿ ನನಗೆ ಹೊಡೆ-ಬಡೆ ಮಾಡಿದರು. ಹೆಚ್ಚಿಗೆ ವರದಕ್ಷಿಣೆ ತೆಗೆದುಕೊಂಡು ಬಾ ಅಂತ ದೈಹಿಕ ಮತ್ತು ಮಾನಸಿಕವಾಗಿ ಕಿರುಕುಳ ನೀಡಿದರು. ದಿಃ17-07-2017 ರಂದು ಆರೋಪಿ ನಂಬರ್ 1 ರವರು ನನಗೆ ಹೊಡೆ-ಬಡೆ ಮಾಡಿದರು. ಈ ಬಗ್ಗೆ ನಾನು ದೂರನ್ನು ನೀಡಿರುತ್ತೇನೆ. ಸಾಕ್ಷಿಯು ದೂರನ್ನು ನೋಡಿ ತನ್ನ ಸಹಿಯನ್ನು ಗುರುತಿಸಿದ್ದು ಅದನ್ನು ನಿ.ಪಿ.1 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿಃ1 ಎ ಎಂದು ಗುರುತಿಸಲಾಯಿತು.

ದಿಃ26-07-2019 ರಂದು ಆರೋಪಿ ನಂಬರ್ 1 ರವರು ನನ್ನ ತಂದೆಗೆ ಹೊಡೆದರು. ಸಿಲಿಂಡರ್ ಬ್ಲಾಸ್ಟ್ ಮಾಡಿಸಿ ನಿನ್ನನ್ನು ಸಾಯಿಸುತ್ತೇನೆಂದು ಆರೋಪಿ ನಂಬರ್ 1 ರವರು ನನಗೆ ಬೆದರಿಕೆ ಹಾಕಿರುತ್ತಾರೆ. ನಂಬರ್ 2 ಮತ್ತು 3 ರವರು ನನಗೆ ಚುಚ್ಚು ಮಾತನಾಡುವುದು, ಹೊಡೆಯುವುದು, ಬೈಯುವುದು ಮಾಡುತ್ತಿದ್ದರು. ಆರೋಪಿ ನಂಬರ್ 1 ರವರಿಗೆ ನನಗೆ ಹಿಂಸೆ ಕೊಡಲು ಹೇಳಿಕೊಡುತ್ತಿದ್ದರು. ದೂರು ನೀಡಿದ ನಂತರ ಪೊಲೀಸರು ಹೆರಕಲ್ಲು ಗ್ರಾಮದಲ್ಲಿ ಮತ್ತು ಸಿರುಗುಪ್ಪ ಪಟ್ಟಣದಲ್ಲಿ ನಾವು ಬಾಡಿಗೆ ಮನೆಯಲ್ಲಿ ಇದ್ದ ಮನೆಯ ಬಳಿ ಪಂಚನಾಮೆ ಮಾಡಿದರು. ಆಗ ಚಾಸಾ-8 ಮತ್ತು 9 ರವರು ಇದ್ದರು. ಸಾಕ್ಷಿಯು ಪಂಚನಾಮೆ ಹಾಗೂ ಅದರಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿಃ 2 ಮತ್ತು 3 ಎಂದು, ಸಾಕ್ಷಿಯ ಸಹಿಯನ್ನು ನಿಪಿಃ2 ಎ ಮತ್ತು 3 ಎ ಎಂದು ಗುರುತಿಸಲಾಯಿತು. ಸ್ಥಳದಲ್ಲಿ ಕಚ್ಚಾ ನಕಾಶೆ ಮತ್ತು ಫೋಟೋವನ್ನು ತೆಗೆದರು. ಸಾಕ್ಷಿಯು ಕಚ್ಚಾ ನಕಾಶೆ ಮತ್ತು ಎರಡು ಫೋಟೋಗಳನ್ನು ನೋಡಿ ಗುರುತಿಸಿದ್ದರಿಂದ ಅವುಗಳನ್ನು ನಿಪಿಃ4, 5, 6 ಮತ್ತು 7 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಗಳನ್ನು ನಿಪಿಃ4 ಎ, 5 ಎ ಎಂದು ಗುರುತಿಸಲಾಯಿತು. ನಂತರ ಪೊಲೀಸರಿಗೆ ನಾನು ವಿವಾಹ ಸಮಯದಲ್ಲಿ ತೆಗೆದ ಭಾವ ಚಿತ್ರಗಳು ಮತ್ತು ಮದುವೆಯ ಆಮಂತ್ರಣ ಪತ್ರಿಕೆಗಳನ್ನು ಹಾಜರು ಪಡಿಸಿದೇನು. ಪೊಲೀಸರು ಅದನ್ನು ಪಂಚನಮೆ ಮಾಡಿ ಜಪ್ತು ಮಾಡಿದರು. ಸದರಿ ಜಪ್ತು ಪಂಚನಾಮೆಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿಃ8 ಎಂದು, ಸಾಕ್ಷಿಯ ಸಹಿಯನ್ನು ನಿಪಿಃ8 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಫೋಟೋಗಳನ್ನು ನೋಡಿ ಗುರುತಿಸಿದ್ದರಿಂದ ಅವುಗಳನ್ನು ನಿಪೀ9 ರಿಂದ 11 ಎಂದು ಗುರುತಿಸಲಾಯಿತು. ಸಾಕ್ಷಿಯು ಆಮಂತ್ರಣ ಪತ್ರಿಕೆಯನ್ನು ನೋಡಿ ಗುರುತಿಸಸಿದ್ದರಿಂದ ಅದನ್ನು ನಿಪಿಃ12 ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ನೋಡಿ ಗುರುತಿಸುತ್ತಾರೆ.

**ಪಾಟಿ ಸವಾಲುಃ ಆರೋಪಿ ಪರ ವಕೀಲರು ಕಾಲವಕಾಶವನ್ನು ಕೇಳಿದ್ದು ಸಕಾರಣ ಇಲ್ಲವಾದ್ದರಿಂದ ಮನವಿಯನ್ನು ತಿರಸ್ಕರಿಸಿ ಪಾಟೀಸವಾಲನ್ನು ಇಲ್ಲವೆಂದು ತೆಗೆದುಕೊಳ್ಳಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)
ಓ.ಹೇ.ಕೆ. ಸರಿ ಇದೆ.

**ಸಿವಿಲ್ ಮತ್ತು ಜೆ.ಎಂ.ಎಫ್.ಸಿ.**
**ನ್ಯಾಯಾಧೀಶರು, ಸಿರುಗುಪ್ಪ .** _